# ಕರ್ನಾಟಕ ವಿಧಾನಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

**ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 04-03-2021 ಪ್ರಶ್ನೆ ಸಂಖ್ಯೆ : 524 (685)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ಕಾಂತರಾಜ್(ಬಿಎಂಎಲ್)(ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರ ನೀಡಬೇಕಾದ ದಿನಾಂಕ : 04-03-2021

ಉತ್ತರಿಸುವ ಸಚಿವರು: ಮಾನ್ಯ ಮುಖ್ಯಮಂತ್ರಿಗಳು

ವಿಷಯ : ರಾಜ್ಯದ ಬೊಕ್ಕಸಕ್ಕೆ ವಿವಿಧ ಮೂಲಗಳಿಂದ ಬರುವ ಹಣದ ಬಗ್ಗೆ

(ಅ) 2021-21 ಆರ್ಥಿಕ ವರ್ಷದ ರಾಜ್ಯದ ಆಯವ್ಯಯದ ಮೊತ್ತವೆಷ್ಟು; ರಾಜಸ್ವಕ್ಕೆ ಒಟ್ಟಾರೆ ಎಲ್ಲಾ ಮೂಲಗಳಿಂದ ಕ್ರೂಢೀಕರಣಗೊಂಡ ಹಣವೆಷ್ಟು; ಕೊರತೆ ಎಷ್ಟು; (ವಿವರವಾದ ಮಾಹಿತಿ ಒದಗಿಸುವುದು)

(ಆ) 2020-21ರ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಯಾವ ಯಾವ ಮೂಲಗಳಿಂದ ಬರಬೇಕಾದ ಹಣ ಎಷ್ಟು; ಎಷ್ಟು ಬಂದಿದೆ; ಬಾಕಿ ಇರುವ ಹಣವೆಷ್ಟು; (ವಿವರವಾಗಿ ಮೂಲ ಹಾಗೂ ಲೆಕ್ಕ ಶೀರ್ಷಿಕೆ ವಿವರಗಳೊಂದಿಗೆ ಮಾಹಿತಿ ಕೊಡುವುದು)

(ಇ) ಸರ್ಕಾರದ ಭದ್ರತಾ ಪತ್ರಗಳು ಅಂದರೇನು; 2020-21ನೇ ಆರ್ಥಿಕ ವರ್ಷದಲ್ಲಿ ಕರ್ನಾಟಕ ಸರ್ಕಾರವು ಭಾರತೀಯ ರಿಸರ್ವ ಬ್ಯಾಂಕ್ ಮೂಲಕ ಎಷ್ಟು ಸಾವಿರ ಕೋಟಿ ಭದ್ರತಾ ಪತ್ರಗಳನ್ನು ಹರಾಜು ಮಾಡಲಾಗಿದೆ; ಇದರಿಂದ ಬಂದ ಹಣವೆಷ್ಟು; (ವಿವರವಾಗಿ ದಿನಾಂಕವಾರು ಮಾಹಿತಿ ಕೊಡುವುದು)

(ಈ) ರಾಜ್ಯದ ಅಭಿವೃದ್ಧಿ ಕಾರ್ಯಗಳಿಗೆ ಹಣ ಬಿಡುಗಡೆ ಮಾಡದಿರಲು ಕಾರಣಗಳೇನು; ಇದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇದರ ಸಂಬಂಧ ಸರ್ಕಾರ ಕೈಗೊಂಡಿರುವ ಕ್ರಮಗಳೇನು?